# ಸರ್ವಶಿಕ್ಷಣ ಅಭಿಯಾನ-ಕರ್ನಾಟಕ

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಸಶಿಅ/ಹೆ.ಮ.ಶಿ/ಸಮಾ.ನೇಮಕ/2006-07 ದಿನಾಂಕ:11.5.2006

## ಸುತ್ತೋಲೆ

ವಿಷಯ: ಹೆಣ್ಣುಮಕ್ಕಳ ಶಿಕ್ಷಣ ಕುರಿತಂತೆ ವಿವಿಧ ಹಂತಗಳಲ್ಲಿನ ರಚನೆಗಳ ಬಲವರ್ಧನೆಗೆ ಸಮಾಲೋಚಕರನ್ನು ಆಯ್ಕೆ ಮಾಡುವ ಬಗ್ಗೆ.

***

ಹೆಣ್ಣುಮಕ್ಕಳ ಶಿಕ್ಷಣ ಕುರಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳ ವಿವಿಧ ಹಂತಗಳಲ್ಲಿ ಸಮಾಲೋಚಕರನ್ನು/ಸಮನ್ವಯಾಧಿಕಾರಿಗಳನ್ನು ಆಯ್ಕೆಮಾಡಬೇಕಾಗಿದೆ. ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಮೇಲುಸ್ತುವಾರಿ ಮಾಡುವುದೇ ಈ ಬಲವರ್ಧನೆಯ ಮೂಲ ಉದ್ದೇಶವಾಗಿದೆ.

ಸಮನ್ವಯಾಧಿಕಾರಿಗಳನ್ನು ಆಯ್ಕೆ ಮಾಡಲು ವಿವರವಾದ ಮಾರ್ಗಸೂಚಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ. ಮಾರ್ಗಸೂಚಿಯಲ್ಲಿನ ವಿವರಗಳನ್ನು ಚಾಚೂ ತಪ್ಪದೆ ಪಾಲಿಸುವುದು. ರಾಜ್ಯದ 17 ಜಿಲ್ಲೆಗಳಲ್ಲಿ 9 ಜಿಲ್ಲೆಗಳಲ್ಲಿ ಜಿಲ್ಲಾ ಜೆಂಡರ್ ಸಮನ್ವಯಾಧಿಕಾರಿಗಳನ್ನು ಹಾಗೂ 61 ಇ.ಬಿ.ಬಿ.ಗಳಲ್ಲಿ 58 ಇ.ಬಿ.ಬಿ.ಗಳಿಗೆ (ಮುಧೋಳ್ ಹಾಗೂ ಹಗರಿಬೊಮ್ಮನಹಳ್ಳಿ ಹೊರತು ಪಡಿಸಿ) ಬ್ಲಾಕ್ ಜೆಂಡರ್ ಸಮನ್ವಯಾಧಿಕಾರಿಗಳನ್ನು ಆಯ್ಕೆ ಮಾಡುವುದು. ಜಿಲ್ಲೆಗಳು ಹಾಗೂ ಆಯ್ಕೆ ಮಾಡಬೇಕಾದ ಸಮನ್ವಯಾಧಿಕಾರಿಗಳ ಸಂಖ್ಯೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಜಿಲ್ಲಾ ಜೆಂಡರ್ ಸಮನ್ವಯಾಧಿಕಾರಿಗಳು(ಡಿ.ಜಿ.ಸಿ) ಹಾಗೂ ಬ್ಲಾಕ್ ಜೆಂಡರ್ ಸಮನ್ವಯಾಧಿಕಾರಿಗಳನ್ನು(ಬಿ.ಜಿ.ಸಿ) ಜಿಲ್ಲಾ ಹಂತದಲ್ಲಿಯೇ ಸ್ಥಳೀಯ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ಸಂಘ ಸಂಸ್ಥೆಗಳ ಮೂಲಕ ನಿಯಮಾನುಸಾರ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು. ಈ ಪ್ರಕ್ರಿಯೆಗೆ ಕೆಜಿಬಿವಿ ಕಾರ್ಯಕ್ರಮದಡಿಯಲ್ಲಿ ರಚಿಸಲಾಗಿರುವ ಜಿಲ್ಲಾ ಸಮನ್ವಯ ಸಮಿತಿಯ ಅನುಮೋದನೆ ಪಡೆಯುವುದು. ಈ ಕಾರ್ಯವನ್ನು ದಿ.30.5.2006ರ ಒಳಗಾಗಿ ಪೂರ್ಣಗೊಳಿಸಿ ಆಯ್ಕೆಯಾದ ಅಭ್ಯರ್ಥಿಗಳ ವಿವರವನ್ನು ದಿ.2.6.2006ರ ಒಳಗಾಗಿ ಮಹಿತಿಯನ್ನು ಶ್ರೀಮತಿ.ಗಿರಿಜ, ಸ.ಕಾ.ಅ, ಇವರ ವಿಭಾಗಕ್ಕೆ ಕಳುಹಿಸಲು ಸೂಚಿಸಿದೆ. ಪ್ರಕಟಣೆಗೆ ಸಂಬಂಧಿಸಿದ ಖರ್ಚುವೆಚ್ಚಗಳನ್ನು ಸರ್ವ ಶಿಕ್ಷಣ ಅಭಿಯಾನದ ಜಿಲ್ಲಾ ಆಡಳಿತಾತ್ಮಕ ವೆಚ್ಚದಡಿಯಲ್ಲಿ ಭರಿಸಲು ಅನುಮತಿ ನೀಡಿದೆ.

(ಸಹಿ)
ಸಹ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಪ್ರತಿಯನ್ನು ಸಂಬಂಧಿಸಿದ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.**

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ

1. ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ.
2. ಸಂಬಂದಿಸಿದ ಜಿಲ್ಲೆಗಳ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ

3
15/5/06

## ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ

### ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ವಿವಿಧ ಹಂತಗಳ ರಚನೆಗಳ ಬಲವರ್ಧನೆಗಾಗಿ ಮಾರ್ಗಸೂಚಿ

**ಪೀಠಿಕೆ / ಪ್ರಸ್ತಾವನೆ :**

ಸರ್ವ ಶಿಕ್ಷಣ ಅಭಿಯಾನವು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಉದ್ದೇಶದಿಂದ 2001-02 ರಲ್ಲಿ ಪ್ರಾರಂಭವಾಗಿದೆ. ಈ ಯೋಜನೆಯು ಹೆಣ್ಣುಮಕ್ಕಳನ್ನೊಳಗೊಂಡಂತೆ ಎಲ್ಲಾ ಮಕ್ಕಳಿಗೆ ಸಮರೋಪಾದಿಯಲ್ಲಿ ಸಮುದಾಯದ ಒಡೆತನದ ಮೂಲಕ ಮಾನವ ಸಾಮರ್ಥ್ಯಗಳನ್ನು ಹೆಚ್ಚಿಸುವ ಒಂದು ಪ್ರಯತ್ನವಾಗಿದೆ.

ಈ ಹಿನ್ನೆಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಆವಿಷ್ಕೃತ ಚಟುವಟಿಕೆಯಡಿಯಲ್ಲಿ 9-14 ವಯೋಮಾನದ ಹೆಣ್ಣು ಮಕ್ಕಳಿಗೆ ಜಾಗೃತಿ ಶಿಕ್ಷಣ ಕಾರ್ಯಕ್ರಮ, ಪ.ಜಾ/ಪ.ಪಂ ಹಾಗೂ ಇತರೆ ಹಿಂದುಳಿದ ವರ್ಗಗಳ ಹೆಣ್ಣು ಮಕ್ಕಳಿಗೆ ವಿನೂತನ ಶೈಕ್ಷಣಿಕ ಕಾರ್ಯಕ್ರಮ (ಚಿಣ್ಣರ ಕರ್ನಾಟಕ ದರ್ಶನ) ಹಾಗೂ ಪೂರ್ವ ಬಾಲ್ಯಾವಸ್ಥೆ ಮತ್ತು ಪಾಲನಾ ಶಿಕ್ಷಣ (ಇ.ಸಿ.ಸಿ.ಇ) ಮಾತ್ರ ಅನುಷ್ಠಾನಗೊಳಿಸಲಾಗುತ್ತಿದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರತ್ಯೇಕ ಕಾರ್ಯಕ್ರಮಗಳನ್ನು ಪ್ರಾಥಮಿಕ ಹಂತದ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ (ಎನ್.ಪಿ.ಇ.ಜಿ.ಇ.ಎಲ್), ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆ.ಜಿ.ಬಿ.ವಿ.) ಕಾರ್ಯಕ್ರಮಗಳನ್ನು ಶಿಕ್ಷಣ ವಂಚಿತ 6-14 ವಯೋಮಾನದ ಹೆಣ್ಣು ಮಕ್ಕಳಿಗೆ ಅದರಲ್ಲೂ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

**ಪರಿಕಲ್ಪನೆ :**

ಹೆಣ್ಣು ಮಕ್ಕಳಲ್ಲಿ ಆತ್ಮಗೌರವ ಮತ್ತು ಆತ್ಮವಿಶ್ವಾಸ ಹೆಚ್ಚಿಸಿ ನಿರ್ದಿಷ್ಟ ವ್ಯಕ್ತಿತ್ವ ರೂಪಿಸಿ ಸಮಾಜಕ್ಕೆ ಅವರ ಕೊಡುಗೆಗಳನ್ನು ಗುರುತಿಸುವಲ್ಲಿ ಸಮಗ್ರ ಶಿಕ್ಷಣ ವ್ಯವಸ್ಥೆಯ ನಿರ್ದಿಷ್ಟ ಮಧ್ಯಸ್ಥಿಕೆಯ ಪಾತ್ರ ಅವಶ್ಯಕವಾಗಿದೆ. ಅದಕ್ಕಾಗಿ ವಿವಿಧ ಹಂತಗಳ ರಚನೆಗಳನ್ನು ಬಲವರ್ಧನೆ ಮಾಡುವುದರ ಮೂಲಕ ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನವು ಸರ್ವ ಶಿಕ್ಷಣ ಅಭಿಯಾನದ ಮೂಲ ಉದ್ದೇಶವಾಗಿದೆ. 2006-07ನೇ ಸಾಲಿನಲ್ಲಿ ವಿವಿಧ ಹಂತಗಳಲ್ಲಿ ಕೆಳಕಂಡಂತೆ ಪ್ರತ್ಯೇಕ ರಚನೆಗಳನ್ನು ನಿರ್ಮಿಸುವುದರ ಮೂಲಕ ಬಲವರ್ಧನೆ ಕಾರ್ಯವನ್ನು ಕೈಗೊಳ್ಳುವುದು.

**ರಾಜ್ಯದಲ್ಲಿನ ವಿವಿಧ ಹಂತಗಳಲ್ಲಿನ ರಚನೆಗಳ ಬಲವರ್ಧನೆಯು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ.**

- 6-14 ವಯೋಮಾನದ ಎಲ್ಲಾ ಹೆಣ್ಣು ಮಕ್ಕಳನ್ನು ಶಾಲೆಗೆ ದಾಖಲಿಸುವುದು ಹಾಗೂ ಶಾಲೆಯಲ್ಲಿ ಉಳಿಯುವಂತೆ ನೋಡಿಕೊಳ್ಳುವುದು.
- ಶಾಲೆಯಿಂದ ಹೊರಗುಳಿದ 7-14 ವಯೋಮಾನದ ಎಲ್ಲಾ ಹೆಣ್ಣು ಮಕ್ಕಳನ್ನು ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಮುಖ್ಯವಾಹಿನಿಗೆ ತರುವುದು.
- ವಿವಿಧ ಚಟುವಟಿಕೆಗಳ ಮೂಲಕ ಶಿಕ್ಷಣದ ಗುಣಮಟ್ಟ ಹೆಚ್ಚಿಸಿ ಹೆಣ್ಣು ಮಕ್ಕಳ ಸಾರ್ವತ್ರಿಕ ಉಳಿಕೆಯಾಗುವಂತೆ ಮಾಡಿ ತನ್ಮೂಲಕ ಅವರ ಸಬಲೀಕರಣಕ್ಕೆ ಒತ್ತು ನೀಡುವುದು.
- ಮಹಿಳಾ ಸಾಕ್ಷರತೆ ಹೆಚ್ಚಿಸುವುದು ಹಾಗೂ ಲಿಂಗತಾರತಮ್ಯವನ್ನು ಸಂಪೂರ್ಣವಾಗಿ ನಿವಾರಿಸುವುದು.
- ಪ.ಜಾತಿ / ಪ.ಪಂಗಡ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳ ಮಕ್ಕಳ ಶಾಲೆ ಬಿಡುವ ಪ್ರಮಾಣವನ್ನು ಕಡಿಮೆಗೊಳಿಸುವುದು.
- ಸ್ಥಳೀಯ ಸಂಘ ಸಂಸ್ಥೆಗಳ ಸಮುದಾಯದ ಸಹಭಾಗಿತ್ವದೊಂದಿಗೆ ಕಾರ್ಯ ನಿರ್ವಹಿಸುವುದು.

- ನವೀನ ಬೋಧನೆ ಹಾಗೂ ಕಲಿಕಾ ಸಾಮಗ್ರಿಗಳನ್ನು ಅಭಿವೃದ್ಧಿಗೊಳಿಸಿ ಶಿಕ್ಷಕರಿಗೆ ಹಾಗೂ ಸಮುದಾಯಕ್ಕೆ ಜೆಂಡರ್ ಸಂವೇದಿ ತರಬೇತಿಯನ್ನು ನೀಡುವುದು.
- ಉದ್ದೇಶಿತ ಗುಂಪುಗಳನ್ನು ಗುರುತಿಸಿ ವಿವಿಧ ಕಾರ್ಯತಂತ್ರಗಳಿಗೆ ಅಳವಡಿಸಲು ಸಹಕಾರಿಯಾಗುವುದು.
- ಹೆಣ್ಣು ಮಕ್ಕಳ ಶಿಕ್ಷಣ ಕುರಿತಂತೆ ಸಮುದಾಯದಲ್ಲಿ ಆಸಕ್ತಿ ಹೆಚ್ಚಿಸುವುದು. ಜಾಗೃತಿ ಮೂಡಿಸುವುದು.
- ವಿವಿಧ ಇಲಾಖೆಗಳು, ಸಂಸ್ಥೆಗಳು ಹಾಗೂ ಮಹಿಳಾ ಸಂಘಟನೆಗಳೊಂದಿಗೆ ಸಮನ್ವಯ ಸಾಧಿಸಿ ಅವರ ನೆರವಿನೊಂದಿಗೆ ಕಾರ್ಯಕ್ರಮ ಹೊಂದಿಕೊಂಡು ಲಿಂಗ ಸಮನ್ವತೆಯನ್ನು ಸಾಧಿಸುವುದು.
- ಸಮುದಾಯ, ಸಂಘಸಂಸ್ಥೆಗಳು ಮತ್ತು ಶಾಲೆಗೆ ಸೇತುವೆಯಂತೆ ಕಾರ್ಯ ನಿರ್ವಹಿಸುವುದು.
- ಪ್ರಾಥಮಿಕ ಹಂತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಯೋಜನೆ, ನಿರ್ವಹಣೆ ಮತ್ತು ಮೌಲ್ಯಮಾಪನಗಳನ್ನು ಕ್ರಿಯಾತ್ಮಕವಾಗಿಸಿ ಹೆಣ್ಣು ಮಕ್ಕಳ ಶಿಕ್ಷಣದ ಸವಾಲುಗಳಿಗೆ ಸ್ಪಂದಿಸುವುದು.
- ವಿವಿಧ ಸಂಶೋಧನಾ ಸಂಸ್ಥೆಗಳೊಂದಿಗೆ ಸಂಪರ್ಕಜಾಲವನ್ನು ಏರ್ಪಡಿಸುವ ಮೂಲಕ ಲಿಂಗ ಸೂಕ್ಷ್ಮ ಹಾಗೂ ಗುಣಾತ್ಮಕ ಕಲಿಕಾ ಬೋಧನಾ ಸಾಮಗ್ರಿಗಳ ಗುಣಮಟ್ಟವನ್ನು ಹೆಚ್ಚಿಸುವುದು.
- ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಶಾಲೆ, ಸಮುದಾಯ ಮತ್ತು ಮನೆಗಳಲ್ಲಿ ಅನುಕೂಲಕರ ವಾತಾವರಣವನ್ನುಂಟು ಮಾಡಿ ಸಮುದಾಯದ ಬೆಂಬಲ ದೊರಕುವಂತೆ ಮಾಡುವುದು.

## ವಿವಿಧ ಹಂತಗಳ ರಚನೆ



**ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಮೌಲ್ಯಮಾಪನ ಮಾಡಲು ವಿವಿಧ ಹಂತಗಳಲ್ಲಿ ಸಮಿತಿಗಳ ರಚನೆ**

**1.ರಾಜ್ಯ ಹಂತದ ಸಮಿತಿ(ರಾಜ್ಯ ಜೆಂಡರ್ ಸಮಿತಿ)**

ಮಾರ್ಗ ಸೂಚಿಯನ್ವಯ ಸಮಿತಿಯನ್ನು ರಚಿಸಿ 6 ತಿಂಗಳಿಗೊಮ್ಮೆ ಸಭೆ ಸೇರಿ ಕಾರ್ಯಕ್ರಮ ಅನುಷ್ಠಾನ, ಮೇಲ್ವಿಚಾರಣೆ, ಮೌಲ್ಯಮಾಪನ, ಹಾಗೂ ಹೊಸ ಕಾರ್ಯತಂತ್ರಗಳನ್ನು ರಚಿಸುವ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವ ಜವಾಬ್ದಾರಿಯನ್ನು ಹೊಂದಿದೆ.

**2.ಜಿಲ್ಲಾ ಜೆಂಡರ್ ಸಮಿತಿ**

- ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಇವರು ಜಿಲ್ಲಾ ಜೆಂಡರ್ ಸಮನ್ವಯಾಧಿಕಾರಿಗಳಾಗಿದ್ದು ಜಿಲ್ಲಾ ಜೆಂಡರ್ ಘಟಕದ ಸಂಚಾಲಕರು
- ಘಟಕದ ಸದಸ್ಯರಾಗಿ
    - ಹೆಣ್ಣು ಮಕ್ಕಳ ಶಿಕ್ಷಣ ಹಾಗೂ ಮಹಿಳೆಯರ ಸಬಲೀಕರಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಪನ್ಮೂಲ ವ್ಯಕ್ತಿಗಳು ಹಾಗೂ ಎನ್.ಜಿ.ಓ ಗಳು,
    - ಸ್ತ್ರೀ ಶಕ್ತಿ ಸಂಘದ ಪ್ರತಿನಿಧಿಗಳು,
    - ಮಹಿಳಾ ಸಮಾಖ್ಯಾ ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳಲ್ಲಿ ಸದರಿ ಸಂಸ್ಥೆಯ ಪ್ರತಿನಿಧಿಗಳು
    - ಪ.ಜಾ./ಪ.ಪಂ ಕ್ಕೆ ಸಂಬಂಧಿಸಿದ ಸಂಘ ಸಂಸ್ಥೆಗಳ ಮಹಿಳಾ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ.
    - ರಾಜ್ಯ ಘಟಕದಿಂದ ಒಬ್ಬ ಪ್ರತಿನಿಧಿಯೂ ಈ ಘಟಕದ ಸದಸ್ಯರಾಗಿರುತ್ತಾರೆ.

**ಕರ್ತವ್ಯಗಳು:**

1. 2 ತಿಂಗಳಿಗೊಮ್ಮೆ ಸಭೆ ಸೇರಿ ವರದಿಯನ್ನು ರಾಜ್ಯ ಕಚೇರಿಗೆ ಸಲ್ಲಿಸುವುದು.
2. ಎಲ್ಲಾ ಮಾದರಿ ಶಾಲೆಗಳಿಗೆ ಸಂಬಂದಿಸಿದಂತೆ ಕ್ರಿಯಾ ಯೋಜನೆ ಸಿದ್ದಪಡಿಸಿ, ನಿಗದಿಪಡಿಸಿದ ವೇಳಾ ಪಟ್ಟಿಯಂತೆ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸೂಚನೆ ನೀಡುವುದು.
3. ಕಾರ್ಯಕ್ರಮದ ಪರಿಷ್ಕರಣೆಗಾಗಿ ಕಾಲಕಾಲಕ್ಕೆ ನಿರಂತರ ಮೇಲುಸ್ತುವಾರಿ ಮತ್ತು ಮೌಲ್ಯಮಾಪನ ಮಾಡುತ್ತಿರಬೇಕು.
4. ಇದಕ್ಕಾಗಿ ಸೂಕ್ತವಾದ ಮೇಲುಸ್ತುವಾರಿ ತಂತ್ರವನ್ನು ಎಲ್ಲಾ ಹಂತಗಳಲ್ಲೂ ರಚಿಸಿ ನಿಯತಕಾಲಿಕವಾಗಿ ಮೌಲ್ಯಮಾಪನ ನಡೆಸಬೇಕು.
5. ತಾಲ್ಲೂಕು ಹಾಗೂ ಕ್ಲಸ್ಟರ್ ಹಂತದಲ್ಲಿ ಕಾರ್ಯ ನಿರ್ವಹಿಸುವ ಪ್ರತಿನಿಧಿಗಳಿಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡುವುದು.

**3. ಬ್ಲಾಕ್ ಜೆಂಡರ್ ಘಟಕ**

- ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ತಾಲ್ಲೂಕು ಜೆಂಡರ್ ಘಟಕದ ಸಮನ್ವಯಾಧಿಕಾರಿಗಳಾಗಿರುತ್ತಾರೆ.
- ಒಬ್ಬ ಸಂಪನ್ಮೂಲ ವ್ಯಕ್ತಿಯನ್ನು ಶಿಕ್ಷಕರ ಸಮುದಾಯದಿಂದ ಆಯ್ಕೆಮಾಡುವುದು
- ಸ್ಥಳೀಯ ಯುವಕ ಸಂಘಗಳ ಸ್ವಯಂ ಸೇವಕರು ಹಾಗೂ ಮಹಿಳಾ ಪ್ರತಿನಿಧಿಗಳು, ಸಂಪನ್ಮೂಲ ವ್ಯಕ್ತಿಗಳು.

**ಕರ್ತವ್ಯಗಳು**

- 2 ತಿಂಗಳಿಗೊಮ್ಮ ಸಭೆ ಸೇರಿ ವರದಿಯನ್ನು ಜಿಲ್ಲೆಗೆ ಸಲ್ಲಿಸುವುದು.
- ಸಿದ್ದಪಡಿಸಿದ ಕ್ರಿಯಾಯೋಜನೆ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಪರಿಶೀಲನೆ.
- ಶಿಕ್ಷಕರಿಗೆ ತರಬೇತಿಗಳನ್ನು ಕೊಡುವುದು
- ಸಮುದಾಯದ ಮೂಲಕ ಪ್ರಚಾರ ಕಾರ್ಯಕ್ರಮ
- ಎಲ್ಲಾ ಹೆಣ್ಣು ಮಕ್ಕಳನ್ನು ಶಾಲೆಗೆ ಕರೆತರುವುದು ಮತ್ತು ಹಾಜರಾತಿ ಮತ್ತು ಶಾಲೆಯಲ್ಲಿ ಉಳಿಯುವಿಕೆ ಪ್ರಮಾಣವನ್ನು ಹೆಚ್ಚಿಸುವುದು.
- ಕ್ಲಸ್ಟರ್ ಮಟ್ಟದ ಸಮಿತಿಗೆ ಮಾರ್ಗದರ್ಶನ ಹಾಗೂ ತರಬೇತಿ

**4.ಕ್ಲಸ್ಟರ್ ಮಟ್ಟದ ಸಮಿತಿ:**

- ಸಂಬಂಧಿಸಿದ ಕ್ಲಸ್ಟರ್ ಮಾದರಿ ಶಾಲೆಯ ಎಸ್.ಡಿ.ಎಮ್.ಸಿ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರು.
- ಕ್ಲಸ್ಟರ್ ಮಾದರಿ ಶಾಲೆಯ ಮುಖ್ಯೋಪಾಧ್ಯಾಯರು ಈ ಸಮಿತಿಯ ಕಾರ್ಯದರ್ಶಿಗಳು
- ಸಂಬಂಧಿಸಿದ ಕ್ಲಸ್ಟರ್‌ನ ಸಿ.ಆರ್.ಪಿ, ಸ್ಥಳೀಯ ಮಹಿಳಾ ಸಂಘ ಸಂಸ್ಥೆಯ ಪ್ರತಿನಿಧಿಗಳು, ಎಸ್.ಡಿ.ಎಂ.ಸಿ ಸದಸ್ಯರು, ಪೋಷಕರು ಒಳಗೊಂಡಂತೆ ಕನಿಷ್ಠ 4 ಮಹಿಳಾ ಸದಸ್ಯರಿರಬೇಕು.

**ಕರ್ತವ್ಯಗಳು**

- ಪ್ರತಿ ತಿಂಗಳು ಸಭೆ ಸೇರುವುದು ವರದಿಯನ್ನು ಜಿಲ್ಲಾ ಹಂತಕ್ಕೆ ನೀಡುವುದು.
- ಕ್ರಿಯಾ ಯೋಜನೆಯಂತೆ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.
- ನಿಯತವಾಗಿ ಕ್ಲಸ್ಟರ್‌ನಲ್ಲಿನ ಹೆಣ್ಣು ಮಕ್ಕಳ ದಾಖಲಾತಿ, ಹಾಜರಾತಿ ಹಾಗೂ ಕಲಿಕೆಯ ಮೇಲುಸ್ತುವಾರಿ.
- ಸಮುದಾಯ ಹಾಗೂ ಸಂಪನ್ಮೂಲ ತಂಡದೊಂದಿಗೆ ಚರ್ಚಿಸಿ ಯೋಜನೆಯ ಉದ್ದೇಶಕ್ಕಾಗಿ ಕಾರ್ಯತಂತ್ರಗಳನ್ನು ರೂಪಿಸುವುದು.
- ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ರೂಪಿಸುವುದು.

**5. ಗ್ರಾಮ ಜೆಂಡರ್ ಸಮಿತಿ**

- ಸಂಬಂಧಿಸಿದ ಶಾಲೆಯ ಎಸ್.ಡಿ.ಎಮ್.ಸಿ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರು
- ಆ ಶಾಲೆಯ ಮುಖ್ಯೋಪಾಧ್ಯಾಯರು ಈ ಸಮಿತಿಯ ಸಂಚಾಲಕರು
- ಆ ಗ್ರಾಮದ ಇಬ್ಬರು ನೆರೆಹೊರೆ ಸಮಿತಿಯ ನಾಯಕಿಯರು ಈ ಸಮಿತಿಯ ಸದಸ್ಯರು
- ಆ ಶಾಲೆಯ ಎಲ್ಲಾ ಶಿಕ್ಷಕರು ಈ ಸಮಿತಿಯ ಸದಸ್ಯರು
- ಸಂಬಂಧಿಸಿದ ಕ್ಲಸ್ಟರ್‌ನಲ್ಲಿನ ಸಿ.ಆರ್.ಪಿ ಹಾಗೂ ಕ್ಲಸ್ಟರ್ ಸಂಯೋಜಕರು ಈ ಸಮಿತಿಯ ಸದಸ್ಯರು

**ಕರ್ತವ್ಯಗಳು**

- ಪ್ರತಿ ತಿಂಗಳಿಗೆ ಎನ್.ಹೆಚ್.ಎಲ್. ಗಳ ಸಭೆಯನ್ನು ಹಳ್ಳಿಯಲ್ಲಿ ಕರೆಯುವುದು. ಹೆಣ್ಣು ಮಕ್ಕಳ ಶಿಕ್ಷಣ ಕುರಿತಂತೆ ಈ ಸಮಿತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವುದು.

- ವಿ.ಇ.ಸಿ. ಸಭೆಯನ್ನು ಎರಡು ತಿಂಗಳಿಗೊಮ್ಮೆ ಕರೆದು ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಚರ್ಚಿಸುವುದು.
- 6 ರಿಂದ 14 ವಯೋಮಾನದ ಎಲ್ಲಾ ಹೆಣ್ಣು ಮಕ್ಕಳನ್ನು ಶಾಲಾ ವಾತಾವರಣಕ್ಕೆ ತರುವುದು ಮತ್ತು ಈ ಮಕ್ಕಳ ಬಗ್ಗೆ ದಾಖಲೆಗಳನ್ನು ನಿರ್ವಹಿಸುವುದು.
- ಶಾಲೆಯಲ್ಲಿನ ಎಲ್ಲಾ ಹೆಣ್ಣು ಮಕ್ಕಳು ಶಿಕ್ಷಣದಲ್ಲಿ ಮುಂದುವರೆಯುತ್ತಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.
- ತಾಯಿ ಮತ್ತು ಶಿಕ್ಷಣಕರ ಸಭೆಗಳು ಪ್ರತಿ ಶಾಲೆಯಲ್ಲಿ ಎರಡು ತಿಂಗಳಿಗೊಮ್ಮೆ ಕರೆದು ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಗುರುತಿಸಲಾದ ಸಮಸ್ಯೆಗಳ ಬಗ್ಗೆ ಗ್ರಾಮ ಜೆಂಡರ್ ಸಮಿತಿಯಲ್ಲಿ ಚರ್ಚಿಸಿ ಪರಿಹಾರವನ್ನು ಕಂಡುಕೊಳ್ಳುವುದು.

### ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಅನುಪಾಲನೆಗಾಗಿ ವಿವಿಧ ಹಂತಗಳಲ್ಲಿ ಸಂಯೋಜಕರ ಸೇವೆಯನ್ನು ಬಳಸಿ ಕೊಳ್ಳುವುದರ ಬಗ್ಗೆ

| | ಜಿಲ್ಲಾ ಜೆಂಡರ್ ಸಂಯೋಜಕರು(DGC) | ತಾಲ್ಲೂಕು ಜೆಂಡರ್ ಸಂಯೋಜಕರು(BGC) | ಕ್ಲಸ್ಟರ್ ಸಂಯೋಜಕರು(CCo) (ಇಲಾಖೆಯಿಂದ ನಿರ್ವಹಿಸಲ್ಪಡುವ ಕ್ಲಸ್ಟರ್‌ಗಳಲ್ಲಿ) |
|---|---|---|---|
| ವಿದ್ಯಾರ್ಹತೆ | ಸ್ನಾತಕೋತ್ತರ ಪದವಿ ಜೊತೆ ಬಿ.ಇಡಿ | ಯಾವುದಾದರೂ ಪದವಿಯೊಂದಿಗೆ ಬಿ.ಇಡಿ | ಕನಿಷ್ಠ ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು |
| ಇತರೆ ಅರ್ಹತೆಗಳು | • ಶೈಕ್ಷಣಿಕ ಸಂಘ ಸಂಸ್ಥೆಗಳಲ್ಲಿ ಕನಿಷ್ಠ 4 ವರ್ಷ ಕೆಲಸ ಮಾಡಿದ ಅನುಭವ<br>• ಸಂಬಂಧಿಸಿದ ಜಿಲ್ಲೆಯವರಾಗಿದ್ದು, ಜಿಲ್ಲೆಯಾದ್ಯಂತ ಪ್ರವಾಸವನ್ನು ಕೈಗೊಳ್ಳುವಂತಿರಬೇಕು.<br>• ಮಹಿಳಾ ಅಭ್ಯರ್ಥಿಯಾಗಿರಬೇಕು<br>• 35 ವಯೋಮಾನಕ್ಕಿಂತ ಕಡಿಮೆ ವಯಸ್ಸಿನವರು<br>• ಕಂಪ್ಯೂಟರ್ ಜ್ಞಾನ ಹೊಂದಿರಬೇಕು | • ಶೈಕ್ಷಣಿಕ ಸಂಘ ಸಂಸ್ಥೆಗಳಲ್ಲಿ ಕನಿಷ್ಠ 3 ವರ್ಷ ಕೆಲಸ ಮಾಡಿದ ಅನುಭವ<br>• ಸಂಬಂಧಿಸಿದ ತಾಲ್ಲೂಕಿನವರಾಗಿದ್ದು, ತಾಲ್ಲೂಕಿನಾದ್ಯಂತ ಪ್ರವಾಸವನ್ನು ಕೈಗೊಳ್ಳುವಂತಿರಬೇಕು.<br>• ಮಹಿಳಾ ಅಭ್ಯರ್ಥಿಯಾಗಿರಬೇಕು<br>• 35 ವಯೋಮಾನಕ್ಕಿಂತ ಕಡಿಮೆ ವಯಸ್ಸಿನವರು<br>• ಕಂಪ್ಯೂಟರ್ ಜ್ಞಾನ ಹೊಂದಿರಬೇಕು | • ಯಾವುದಾದರೂ ಸ್ಥಳೀಯ ಸಂಘ ಸಂಸ್ಥೆಗಳ ಸದಸ್ಯರಾಗಿರಬೇಕು.<br>• 18 ರಿಂದ 35 ವಯೋಮಾನದವರಾಗಿರಬೇಕು<br>• ಕನ್ನಡ ಸರಾಗವಾಗಿ ಓದಲು ಮತ್ತು ಬರೆಯಲು ಬರಬೇಕು.<br>• ಸಂಬಂಧಿಸಿದ ಕ್ಲಸ್ಟರ್ ವ್ಯಾಪ್ತಿಯಲ್ಲಿನ ವಾಸಿಯಾಗಿದ್ದು, ಕ್ಲಸ್ಟರ್ ವ್ಯಾಪ್ತಿಯಲ್ಲಿ ಪ್ರಯಾಣ ಮಾಡುವಂತಿರಬೇಕು.<br>• ಮಹಿಳೆಯರಾಗಿರಬೇಕು<br>• ಪ.ವರ್ಗ/ಪ.ಪಂ ಹಾಗೂ ಅಲ್ಪಸಂಖ್ಯಾತ ಮಹಿಳೆಯರಿಗೆ ಪ್ರಾತಿನಿಧ್ಯತೆ ನೀಡುವುದು |
| ಅರ್ಹ ವ್ಯಾಪ್ತಿ | **3 ಅಥವಾ 3 ಕ್ಕಿಂತ ಹೆಚ್ಚು ಇಬಿಬಿ ಗಳಿರುವ ಜಿಲ್ಲೆಗಳಲ್ಲಿ ಒಬ್ಬರು ಡಿ.ಜಿ.ಸಿ** | ಪ್ರತಿ ಇ.ಬಿ.ಬಿ ಗೆ ಒಬ್ಬರು ಬಿ.ಜಿ.ಸಿ | ಎನ್.ಪಿ.ಇ.ಜಿ.ಇ.ಎಲ್ ಅನುಷ್ಠಾನದಲ್ಲಿರುವ ಇಲಾಖೆವತಿಯಿಂದ ನಿರ್ವಹಿಸಲಾಗುತ್ತಿರುವ ಪ್ರತಿ ಕ್ಲಸ್ಟರ್‌ಗೆ ಒಬ್ಬರು ಸಿ.ಸಿ.ಓ |
| ಸೇವೆಯ ಅವಧಿ | ಒಂದು ವರ್ಷ | ಒಂದು ವರ್ಷ | ಒಂದು ವರ್ಷ |
| ಗೌರವಧನ ಮತ್ತು ಇತರೆ ಆರ್ಥಿಕ ಸೌಲಭ್ಯಗಳು | • ಪ್ರತಿ ತಿಂಗಳಿಗೆ ರೂ.7500/– ಗೌರವಧನ<br>• ಪ್ರವಾಸ/ದಿನಭತ್ಯೆಯನ್ನು ಕೆ.ಸಿ.ಎಸ್.ಆರ್. ನಿಯಮಗಳನ್ವಯ (ಪ್ರೌಢಶಾಲಾ ಮುಖ್ಯ ಶಿಕ್ಷಕರ ವೇತನದ ಕನಿಷ್ಠ ವೇತನವನ್ನು ಪರಿಗಣಿಸಿ)<br>• ಗೌರವ ಧನವನ್ನು ಸಂಬಂಧಿಸಿದ ಸಂಸ್ಥೆಗೆ ಬಿಡುಗಡೆ ಮಾಡುವುದು ಹಾಗೂ ಟಿ.ಎ/ಡಿ.ಎ ಯನ್ನು [illegible] | • ಪ್ರತಿ ತಿಂಗಳಿಗೆ ರೂ.5500/– ಗೌರವ ಧನ<br>• ಪ್ರವಾಸ/ದಿನಭತ್ಯೆಯನ್ನು ಕೆ.ಸಿ.ಎಸ್.ಆರ್. ನಿಯಮಗಳನ್ವಯ (ಪ್ರೌಢಶಾಲಾ ಶಿಕ್ಷಕರ ವೇತನದ ಕನಿಷ್ಠ ವೇತನವನ್ನು ಪರಿಗಣಿಸಿ)<br>• ಗೌರವ ಧನವನ್ನು ಸಂಬಂಧಿಸಿದ ಸಂಸ್ಥೆಗೆ ಬಿಡುಗಡೆ ಮಾಡುವುದು ಹಾಗೂ ಟಿ.ಎ/ಡಿ.ಎ ಯನ್ನು ಸಂಬಂಧಿಸಿದ ಸಂಯೋಜಕರಿಗೆ [illegible] | • ಕಾರ್ಯ ನಿರ್ವಹಿಸಿದ ಪ್ರತಿ ದಿನಕ್ಕೆ ರೂ.50/–ಗಳ ಗೌರವಧನ.<br>• ಇದು ಎಲ್ಲಾ ರೀತಿಯ ಭತ್ಯೆಗಳನ್ನು ಒಳಗೊಂಡಿದೆ.<br>• ಕನಿಷ್ಠ 20 ದಿನಗಳ ಪ್ರತಿ ತಿಂಗಳ ಹಾಜರಾತಿ ಅತ್ಯಗತ್ಯ<br>• ತಾಲ್ಲೂಕು ಹಾಗೂ ಜಿಲ್ಲಾ ಹಂತದ ಸಭೆಗಳಿಗೆ ನಿಖರ ಪ್ರಯಾಣ ಭತ್ಯೆ. ಇದನ್ನು ಸ.ಶಿ.ಆ ಆಡಳಿತಾತ್ಮಕ ವೆಚ್ಚದಿಯಲ್ಲಿ ಭರಿಸುವುದು. |

| | | | |
|---|---|---|---|
| | ಸಂಬಂಧಿಸಿದ ಸಂಯೋಜಕರಿಗೆ ನೀಡವುದು | ನೀಡವುದು | • ಗೌರವ ಧನವನ್ನು ಸಂಬಂಧಿಸಿದ ಸಂಘಕ್ಕೆ ಬಿಡುಗಡೆ ಮಾಡುವುದು ಹಾಗೂ ಪ್ರವಾಸ ಭತ್ಯೆಯನ್ನು ಸಂಬಂಧಿಸಿದ ಸಂಯೋಜಕರಿಗೆ ನೀಡವುದು |
| ಗೌರವಧನ ಬಿಡುಗಡೆಮಾಡುವ ಪ್ರಾಧಿಕಾರ | • ಗೌರವ ಧನ ಹಾಗೂ ಟಿ.ಎ/ಡಿ.ಎ ಭತ್ಯೆಯನ್ನು ಜಿಲ್ಲಾ ಹಂತದ ಸರ್ವ ಶಿಕ್ಷಣ ಅಭಿಯಾನದ ಆಡಳಿತಾತ್ಮಕ ವೆಚ್ಚದಡಿಯಲ್ಲಿ<br>• ಡಿ.ವೈ.ಪಿ.ಸಿ ರವರು ನೀಡುವ ಸಂಯೋಜಕರ ತೃಪ್ತಿಕರ ಕಾರ್ಯನಿರ್ವಹಣಾ ಪ್ರತ್ರದ ಆಧಾರದ ಮೇಲೆ ಉಪನಿರ್ದೇಶಕರು(ಆಡಳಿತ) ಇವರು ಗೌರವ ಧನ ಬಿಡುಗಡೆ ಮಾಡುವುದು<br>• ಸಂಬಂಧಿಸಿದ ಸಂಘ ಸಂಸ್ಥೆಗೆ ಬಿಡುಗಡೆ ಮಾಡುವುದು. | • ಗೌರವ ಧನ ಹಾಗೂ ಟಿ.ಎ/ಡಿ.ಎ ಭತ್ಯೆನ್ನು ಜಿಲ್ಲಾ ಹಂತದ ಸರ್ವ ಶಿಕ್ಷಣ ಅಭಿಯಾನದ ಆಡಳಿತಾತ್ಮಕ ವೆಚ್ಚದಡಿಯಲ್ಲಿ<br>• ಬಿ.ಆರ್.ಸಿ ರವರು ನೀಡುವ ಸಂಯೋಜಕರ ತೃಪ್ತಿಕರ ಕಾರ್ಯನಿರ್ವಹಣಾ ಪತ್ರದ ಆಧಾರದ ಮೇಲೆ ಉಪನಿರ್ದೇಶಕರು(ಆಡಳಿತ) ಇವರು ಗೌರವ ಧನ ಬಿಡುಗಡೆ ಮಾಡುವುದು<br>• ಸಂಬಂಧಿಸಿದ ಸಂಘ ಸಂಸ್ಥೆಗೆ ಬಿಡುಗಡೆ ಮಾಡುವುದು. | • ಸಂಬಂಧಿಸಿದ ಕ್ಲಸ್ಟರ್‌ನ ಎನ್.ಪಿ.ಇ.ಜಿ.ಇ.ಎಲ್ ಕಾರ್ಯಕ್ರಮದ ಆಡಳಿತಾತ್ಮಕ ವೆಚ್ಚದಡಿಯಲ್ಲಿ<br>• ಸಂಬಂಧಿಸಿದ ಕ್ಲಸ್ಟರ್‌ನ ಸಿ.ಆರ್.ಪಿ. ರವರ ದೃಢೀಕರಣದೊಂದಿಗೆ ಕ್ಲಸ್ಟರ್ ಸಮಿತಿಯಲ್ಲಿನ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ಜಂಟಿ ಖಾತೆಯಿಂದ ಬಿಡುಗಡೆ ಮಾಡುವುದು.<br>• ಸಂಬಂಧಿಸಿದ ಸಂಘ ಸಂಸ್ಥೆಗೆ ಬಿಡುಗಡೆ ಮಾಡುವುದು. |
| ರಜೆ ಸೌಲಭ್ಯ | • ಕೆಲಸ ನಿರ್ವಹಿಸಿದ ಪ್ರತಿ ತಿಂಗಳಿಗೆ 1 (ಒಂದು) ಸಾಂದರ್ಭಿಕ ರಜೆ<br>• ಹೆಚ್ಚಿನ ರಜೆ ಪಡೆದರೆ ಸಂಬಳವಿಲ್ಲದ ರಜೆ (ಎಲ್.ಡಬ್ಲ್ಯೂ.ಎ.) ಎಂದು ಪರಿಗಣಿಸುವುದು. | • ಕೆಲಸ ನಿರ್ವಹಿಸಿದ ಪ್ರತಿ ತಿಂಗಳಿಗೆ 1 (ಒಂದು) ಸಾಂದರ್ಭಿಕ ರಜೆ<br>• ಹೆಚ್ಚಿನ ರಜೆ ಪಡೆದರೆ ಸಂಬಳವಿಲ್ಲದ ರಜೆ (ಎಲ್.ಡಬ್ಲ್ಯೂ.ಎ.) ಎಂದು ಪರಿಗಣಿಸುವುದು. | • ಕೆಲಸ ನಿರ್ವಹಿಸಿದ ದಿನಗಳಿಗೆ ಪ್ರತಿ ದಿನಕ್ಕೆರೂ.50/-ರಂತೆ ಗೌರವ ಧನ<br>• ಪ್ರತಿ ತಿಂಗಳು ಕನಿಷ್ಠ 20 ದಿನಗಳು ಕಾರ್ಯನಿರ್ವಹಿಸುವುದು ಕಡ್ಡಾಯವಾಗಿದೆ ಇಲ್ಲವಾದರೆ ಬೇರೆ ಸಂಯೋಜಕರನ್ನು ಆಯ್ಕೆ ಪಟ್ಟಿಯಲ್ಲಿನ ನಂತರದ ಅಭ್ಯರ್ಥಿಯನ್ನು ಕೂಡಲೇ ನಿಯೋಜಿಸುವ ವ್ಯವಸ್ಥೆ ಮಾಡುವುದು |
| ಆಯ್ಕೆ ಸಮಿತಿ | • ಕೆ.ಜಿ.ಬಿ.ವಿ. ಶಿಕ್ಷಕರ ಆಯ್ಕೆ ಸಮಿತಿಯೇ ಈ ಸಂಯೋಜಕರನ್ನು ಆಯ್ಕೆ ಮಾಡುವುದು<br>• ಪತ್ರಿಕೆಗಳ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು | • ಜಿಲ್ಲಾ ಹಂತದಲ್ಲಿ ಕೆಜಿಬಿವಿ ಆಯ್ಕೆ ಸಮಿತಿಯ ಮೂಲಕ ಡಿ.ಜಿ.ಸಿ ಹಾಗೂ ಬಿ.ಜಿ.ಸಿ ಗಳನ್ನು ಒಂದೇ ಪ್ರಕ್ರಿಯೆಯಲ್ಲಿ ಆಯ್ಕೆ ಮಾಡುವುದು<br>• ಪತ್ರಿಕೆಗಳ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು | • ಸಂಬಂಧಿಸಿ ಮಾದರಿ ಕ್ಲಸ್ಟರ್ ಶಾಲೆಯಲ್ಲಿನ ಜೆಂಡರ್ ಸಮಿತಿಯ ಮೂಲಕ ಆಯ್ಕೆ<br>• ಕ್ಲಸ್ಟರ್‌ನ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಮೂಲಕ ವ್ಯಾಪ್ತಿಯಲ್ಲಿನ ಸಂಘ ಸಂಸ್ಥೆಗಳ ಅರ್ಹ ಮಹಿಳೆಯರ ಪಟ್ಟಿಯನ್ನು ಕ್ಲಸ್ಟರ್ ಹಂತಕ್ಕೆ ಪಡೆದು ಸೂಕ್ತ ಅಭ್ಯರ್ಥಿಯ ಆಯ್ಕೆ ಮಾಡುವುದು |
| ಆಯ್ಕೆ ವಿಧಾನ | • 50 ಅಂಕಗಳ ಲಿಖಿತ ಪರೀಕ್ಷೆ (ಸಾಮಾನ್ಯ ಜ್ಞಾನ, ಲಿಂಗತ್ವ ಮನೋಭಾವ, ಹೆಣ್ಣುಮಕ್ಕಳ ಶಿಕ್ಷಣದ ಮಹತ್ವ, ವೈಜ್ಞಾನಿಕ ವಿಶ್ಲೇಷಣೆ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಜ್ಞಾನ)<br>• 20 ಅಂಕಗಳ ಮೌಖಿಕ ಪರೀಕ್ಷೆ (ಇಲಾಖೆಗೆ/ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ)<br>• 10 ಅಂಕಗಳು ಸ್ನಾತಕೊತ್ತರ ಪದವಿಯಲ್ಲಿ ಶ್ರೇಣಿಗನುಸಾರವಾಗಿ | • 50 ಅಂಕಗಳ ಲಿಖಿತ ಪರೀಕ್ಷೆ (ಸಾಮಾನ್ಯ ಜ್ಞಾನ, ಲಿಂಗತ್ವ ಮನೋಭಾವ, ಹೆಣ್ಣುಮಕ್ಕಳ ಶಿಕ್ಷಣದ ಮಹತ್ವ, ವೈಜ್ಞಾನಿಕ ವಿಶ್ಲೇಷಣೆ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಜ್ಞಾನ)<br>• 20 ಅಂಕಗಳ ಮೌಖಿಕ ಪರೀಕ್ಷೆ (ಇಲಾಖೆಗೆ/ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ)<br>• 10 ಅಂಕಗಳು ಪದವಿಯಲ್ಲಿ ಶ್ರೇಣಿಗನುಸಾರವಾಗಿ | • ದಿನದ ಪೂರ್ವಾಹ್ನದಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಅನುಷ್ಠಾನದಲ್ಲಿರುವ ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳ ಕುರಿತು ಮಾಹಿತಿಯನ್ನು ಒದಗಿಸುವುದು.<br>• ಸಂಬಂಧಿಸಿದ ಸಮಿತಿಯ ಸಮ್ಮುಖದಲ್ಲಿ ಸಿ.ಆರ್.ಸಿ ಹಾಗೂ ಮುಖ್ಯೋಪಾಧ್ಯಾಯರ ನೇತೃತ್ವದಲ್ಲಿ ಪ್ರಮುಖ ಕೌಶಲ್ಯಗಳಾದ ಕನ್ನಡ ಬರವಣಿಗೆ, ಓದುವುದು, ಅಭ್ಯಸಿಕೊಳ್ಳುವ ಕೌಶಲ್ಯ, ಮಾಹಿತಿ ಸಂಗ್ರಹಿಸುವ ಹಾಗೂ ಸಮುದಾಯದೊಂದಿಗೆ ಹೊಂದಾಣಿಕಾ ಮನೋಭಾವ |

| | | | |
|---|---|---|---|
| | • 10 ಅಂಕಗಳು ಬಿ.ಇ.ಡಿ ಯಲ್ಲಿನ ಶ್ರೇಣಿಗನುಸಾರವಾಗಿ<br>• 10 ಅಂಕಗಳು–ಇತರೆ ಕೌಶಲ್ಯಗಳಿಗೆ ಉದಾ. ಕಂಪ್ಯೂಟರ್, ಹೆಚ್ಚುವರಿ ಶಿಕ್ಷಣ ಇತ್ಯಾದಿ | • 10 ಅಂಕಗಳು ಬಿ.ಇ.ಡಿ ಯಲ್ಲಿನ ಶ್ರೇಣಿಗನುಸಾರವಾಗಿ<br>• 10 ಅಂಕಗಳು–ಇತರೆ ಕೌಶಲ್ಯಗಳಿಗೆ ಉದಾ. ಕಂಪ್ಯೂಟರ್, ಹೆಚ್ಚುವರಿ ಶಿಕ್ಷಣ ಇತ್ಯಾದಿ | ಹೊಂದಿರುವ ಬಗ್ಗೆ ಲಿಖಿತ ಹಾಗೂ ಮೌಖಿಕ ಪರೀಕ್ಷೆಗಳ ಮೂಲಕ ಪರಿಶೀಲಿಸುವುದು. |

**ಜವಾಬ್ದಾರಿ ಮತ್ತು ಕರ್ತವ್ಯಗಳು**

**1. ಜಿಲ್ಲಾ ಜೆಂಡರ್ ಸಂಯೋಜಕರು**

i. ಜಿಲ್ಲಾ ಮಟ್ಟದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಕಾರ್ಯಾಗಾರ ಮಾಡುವುದು.

ii. ಪ್ರತಿ ತಾಲ್ಲೂಕು ಹಾಗೂ ಕ್ಲಸ್ಟರ್ ಶಾಲೆಗೆ ಭೇಟಿ ನೀಡಿ ಮಾರ್ಗದರ್ಶನ ನೀಡುವುದು.

iii. ಜೆಂಡರ್ ಸಂಬಂಧ ಪಟ್ಟಂತೆ ತರಬೇತಿ ಕಾರ್ಯಕ್ರಮಗಳನ್ನು ಶಿಕ್ಷಕರಿಗೆ ಹಾಗೂ ಸಮುದಾಯದವರಿಗೆ ನೀಡುವುದು.

iv. ಜಾಗೃತಿ ಶಿಬಿರಗಳನ್ನು ಏರ್ಪಡಿಸುವುದು.

v. ಕಲಿಕಾ ಸಾಮಗ್ರಿಗಳನ್ನು ಅಭಿವೃದ್ಧಿಗೊಳಿಸಿ ಕಲಿಕಾ ಪ್ರಕ್ರಿಯೆಯಲ್ಲಿ ಬಳಸುವಂತೆ ಪ್ರೇರಣೆ ನೀಡುವುದು.

vi. ಸಂಬಂಧಪಟ್ಟ ಉನ್ನತ ಅಧಿಕಾರಿಗಳಿಗೆ ನಿಖರವಾದ ಅಂಕಿ ಅಂಶಗಳ ಸಮೇತ ಪ್ರಗತಿ ವರದಿಯನ್ನು ಕಾಲಕಾಲಕ್ಕೆ ಸಲ್ಲಿಸುವುದು.

vii. ನಿಗದಿತ ಪ್ರವಾಸಸೂಚಿ (ತಾತ್ಕಾಲಿಕ ಪ್ರವಾಸ) ಹಾಗೂ ಪ್ರವಾಸ ದಿನಚರಿಯನ್ನು ಜಿಲ್ಲಾ ಉಪಸಮನ್ವಯಾಧಿಕಾರಿಗಳಿಗೆ ಸಲ್ಲಿಸುವುದು.

viii. ಪ್ರತಿ ತಿಂಗಳು ತಾಲ್ಲೂಕು ಹಂತದಲ್ಲಿ ಸಿ.ಆರ್.ಪಿ.ರವರ ಶಿಕ್ಷಣ ಸಂಯೋಜಕರ, ಬಿ.ಆರ್.ಪಿ ಹಾಗೂ ಕ್ಲಸ್ಟರ್ ಜೆಂಡರ್ ಸಂಯೋಜಕರ ಸಭೆಯನ್ನು ಸಂಘಟಿಸುವುದು.

ix. ಮಹಿಳಾ ಸಮಾಖ್ಯದ ಜೊತೆಗೆ ಸಹಕಾರ ಹೊಂದುತ್ತಾ, ಕಾರ್ಯ ನಿರ್ವಹಿಸುವುದು.

x. ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸುವಲ್ಲಿ ಯೋಜನೆಯನ್ನು ತಯಾರಿಸುವುದು.

xi. ಜನವಸತಿ ಯೋಜನೆಯಿಂದ ಜಿಲ್ಲಾ ಹಂತದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಇತರೆ ಜವಾಬ್ದಾರಿಗಳನ್ನು ನಿರ್ವಹಿಸುವುದು.

xii. ಕೆ.ಜಿ.ಬಿ.ವಿ. ಶಾಲೆಗೆ ಸಂದರ್ಶನ ನೀಡುವುದರ ಮೂಲಕ ಸಲಹೆ ಮಾರ್ಗದರ್ಶನ ನೀಡುವುದು.

xiii. ರಾಜ್ಯಮಟ್ಟದ ಮಾಸಿಕ ಸಭೆಗಳಿಗೆ ನಿಗದಿತ ಪ್ರಗತಿ ವರದಿಯೊಂದಿಗೆ ಕಡ್ಡಾಯವಾಗಿ ಹಾಜರಾಗುವುದು.

xiv. ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳಡಿಯಲ್ಲಿನ ಎಲ್ಲಾ ಚಟುವಟಿಕೆಗಳು ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಪರಿಶೀಲಿಸಿ ಅನುಷ್ಠಾನ ಕಾರ್ಯದಲ್ಲಿ ಮಾರ್ಗದರ್ಶನ ನೀಡುವುದರೊಂದಿಗೆ ಸಹಕರಿಸುವುದು.

xv. ರಾಜ್ಯ ಕಚೇರಿಯಿಂದ ಹಾಗೂ ಜಿಲ್ಲಾ ಕಚೇರಿಯಿಂದ ಹೆಣ್ಣುಮಕ್ಕಳ ಶಿಕ್ಷಣ ಕುರಿತಂತೆ ನೀಡಲಾಗುವ ಹೆಚ್ಚುವರಿ ಕರ್ತವ್ಯಗಳನ್ನು ನಿರ್ವಹಿಸುವುದು.

## 2. ಬ್ಲಾಕ್ ಜೆಂಡರ್ ಸಂಯೋಜಕರು

i. ಜಿಲ್ಲಾ ಮಟ್ಟದ ಜೆಂಡರ್ ಸಮನ್ವಯಾಧಿಕಾರಿಗಳೊಂದಿಗೆ ಸಮನ್ವಯ ಹಾಗೂ ಸಹಯೋಗ ಸಾಧಿಸಿ ಪ್ರಸ್ತುತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ.

ii. ಗ್ರಾಮಮಟ್ಟದಲ್ಲಿ ಶಿಕ್ಷಣಕ್ಕೆ ಅವಶ್ಯಕವಾದ ಯೋಜನೆಗಳನ್ನು ರೂಪಿಸಲು ಕ್ಲಸ್ಟರ್, ಜೆಂಡರ್ ಸಮನ್ವಯಾಧಿಕಾರಿಗಳಿಗೆ ಸಹಕಾರ ನೀಡಬೇಕು.

iii. ಸಿದ್ಧಪಡಿಸಲಾದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಮೇಲುಸ್ತುವಾರಿ

iv. ಕ್ಲಸ್ಟರ್ ಮಟ್ಟದ ಎಲ್ಲಾ ಯೋಜನೆಗಳನ್ನು ಕ್ರೋಢೀಕರಿಸಿ ಬ್ಲಾಕ್ ಹಂತದ ವಾರ್ಷಿಕ ಯೋಜನೆಯನ್ನು ತಯಾರಿಸುವುದು.

v. ಬ್ಲಾಕ್‌ನಲ್ಲಿನ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸೂಕ್ತ ವಾತಾವರಣ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಬೇಕು.

vi. ಹೆಣ್ಣು ಮಕ್ಕಳ ದಾಖಲಾತಿ, ಶಾಲೆಯಲ್ಲಿ ಉಳಿಯುವಿಕೆ ಮತ್ತು ಕಲಿಕಾ ಸಾಧನೆ ಇವುಗಳ ಬಗ್ಗೆ ನಿರಂತರ ಮೇಲುಸ್ತುವಾರಿ ಮಾಡುವುದರ ಜೊತೆಗೆ ಸಂಪನ್ಮೂಲ ತಂಡ ಹಾಗೂ ಸಮುದಾಯದೊಡನೆ ಪರಿಣಾಮಕಾರಿ ಕಾರ್ಯತಂತ್ರಗಳನ್ನು ರಚಿಸಿ ಕಾರ್ಯ ನಿರ್ವಹಿಸುವುದರೊಂದಿಗೆ ಯೋಜನೆಯ ಗುರಿಯನ್ನು ತಲುಪುವುದು.

vii. ಕ್ಲಸ್ಟರ್ ಜಂಡರ್ ಸಮನ್ವಯಾಧಿಕಾರಿಗಳಿಗೆ ಮತ್ತು ಶಿಕ್ಷಕರಿಗೆ ಅವಶ್ಯಕವಾದ ತರಬೇತಿಗಳನ್ನು ಕೊಡುವುದು / ಸಂಯೋಜಿಸುವುದು.

viii. ಬ್ಲಾಕ್ ಹಂತದಲ್ಲಿ ತಿಂಗಳಿಗೊಮ್ಮೆ ಕ್ಲಸ್ಟರ್ ಹಂತದ ಚಟುವಟಿಕೆಗಳ ಬಗ್ಗೆ ಪರಿಶೀಲನಾ ಸಭೆ ಮಾಡಿ ಅವಶ್ಯಕ ಮಾರ್ಗದರ್ಶನಗಳನ್ನು ನೀಡುವುದು.

ix. ಈ ಮೇಲಿನ ಯೋಜನೆಗಳನ್ನು ಅನುಷ್ಠಾನದ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಕ್ಷೇತ್ರ ಭೇಟಿ ಕಡ್ಡಾಯ. (ಕನಿಷ್ಠ ತಿಂಗಳಿಗೆ 12 ಕ್ಷೇತ್ರಗಳಲ್ಲಿ ಕಡ್ಡಾಯ)

x. ಕಾರ್ಯಕ್ಷೇತ್ರಕ್ಕೆ ಅಗತ್ಯವಾದ ಮಾಹಿತಿ ಕೈಪಿಡಿಗಳನ್ನು / ಮಾರ್ಗಸೂಚಿ ಸಿದ್ಧಪಡಿಸಿ ಕ್ಲಸ್ಟರ್ ಹಂತಕ್ಕೆ ಒದಗಿಸುವುದು.

xi. ಕ್ಲಸ್ಟರ್ ಹಂತದಲ್ಲಿ ಕ್ರೋಢೀಕರಣಗೊಳಿಸಿ ಸಮಗ್ರ ವರದಿಯನ್ನು ಜಿಲ್ಲಾ ಹಂತಕ್ಕೆ ಸಲ್ಲಿಸುವುದು.

xii. ಸಮುದಾಯದ ಸಹಯೋಗದೊಂದಿಗೆ ಸಿ.ಸಿ.ಓ.ಗಳು ಕಾರ್ಯಕ್ರಮ ಅನುಷ್ಠಾನಗೊಳಿಸುವುದನ್ನು ಖಚಿತಪಡಿಸಿಕೊಳ್ಳಬೇಕು.

xiii. ಕಾಲಕಾಲಕ್ಕೆ ವರದಿಗಳನ್ನು ಬಿ.ಇ.ಓ / ಬಿ.ಆರ್.ಸಿ.ಗೆ ಕಳುಹಿಸಬೇಕು.

xiv. ಹೆಣ್ಣುಮಕ್ಕಳ ಶಿಕ್ಷಣ ಕಾರ್ಯಕ್ರಮಗಳಡಿಯಲ್ಲಿನ ಎಲ್ಲಾ ಚಟುವಟಿಕೆಗಳು ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಪರಿಶೀಲಿಸಿ ಅನುಷ್ಠಾನ ಕಾರ್ಯದಲ್ಲಿ ಮಾರ್ಗದರ್ಶನ ನೀಡುವುದರೊಂದಿಗೆ ಸಹಕರಿಸುವುದು.

xv. ರಾಜ್ಯ ಕಚೇರಿ, ಜಿಲ್ಲಾ ಹಾಗೂ ಬ್ಲಾಕ್ ಕಚೇರಿಯಿಂದ ಹೆಣ್ಣುಮಕ್ಕಳ ಶಿಕ್ಷಣ ಕುರಿತಂತೆ ನೀಡಲಾಗುವ ಹೆಚ್ಚುವರಿ ಕರ್ತವ್ಯಗಳನ್ನು ನಿರ್ವಹಿಸುವುದು.

## ೩. ಕ್ಲಸ್ಟರ್ ಸಂಯೋಜಕರು

ಪ್ರತಿ ಕ್ಲಸ್ಟರ್‌ನಲ್ಲಿ ಈಗಾಗಲೇ ನಡೆಸಲಾಗಿರುವ ಮಕ್ಕಳ ಗಣತಿಯಲ್ಲಿನ ಶಾಲೆ ಬಿಟ್ಟ ಹೆಣ್ಣು ಮಕ್ಕಳ ಪಟ್ಟಿಯನ್ನು ಪರಿಶೀಲಿಸಿ ವ್ಯತ್ಯಾಸವನ್ನು ಸರಿಪಡಿಸಿಕೊಳ್ಳುವುದು.

i. ಪ್ರತಿ ಹಳ್ಳಿಯಲ್ಲಿನ ಶಾಲೆಯ ಮೂಲಕ 20 ಮನೆಗಳಿಗೆ (ಒಂದೇ ಕ್ಷೇತ್ರದಲ್ಲಿರುವ / ಓಣಿಯಲ್ಲಿರುವ) ಒಬ್ಬರು ನೆರೆಹೊರೆ ಗುಂಪು ನಾಯಕಿಯನ್ನು ಆಯ್ಕೆ ಮಾಡುವುದು.

ii. ಪ್ರತಿ ಶಾಲೆಯಲ್ಲಿ ವಿ.ಜಿ.ಸಿ. (ವಿಲೇಜ್ ಜೆಂಡರ್ ಕಮಿಟಿ) ರಚಿಸಲು ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

iii. ಪ್ರತಿ ತಿಂಗಳಿಗೆ ಎನ್.ಹೆಚ್.ಎಲ್. ಗಳ ಸಭೆಯನ್ನು ಗ್ರಾಮದಲ್ಲಿ ಕರೆಯುವುದು. ಹೆಣ್ಣು ಮಕ್ಕಳ ಶಿಕ್ಷಣ ಕುರಿತಂತೆ ಈ ಸಮಿತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವುದು.

iv. ವಿ.ಇ.ಸಿ. ಸಭೆಯನ್ನು ಎರಡು ತಿಂಗಳಿಗೊಮ್ಮೆ ಕರೆದು ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಚರ್ಚಿಸುವುದು.

v. 6 ರಿಂದ 14 ವಯೋಮಾನದ ಎಲ್ಲಾ ಹೆಣ್ಣು ಮಕ್ಕಳನ್ನು ಶಾಲಾ ವಾತಾವರಣಕ್ಕೆ ತರುವುದು ಮತ್ತು ಈ ಮಕ್ಕಳ ಬಗ್ಗೆ ದಾಖಲೆಗಳನ್ನು ನಿರ್ವಹಿಸುವುದು.

vi. ಶಾಲೆಯಲ್ಲಿನ ಎಲ್ಲಾ ಹೆಣ್ಣು ಮಕ್ಕಳು ಶಿಕ್ಷಣದಲ್ಲಿ ಮುಂದುವರೆಯುತ್ತಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.

vii. ವಿವಿಧ ಸಮಸ್ಯೆಗಳನ್ನು ಗುರುತಿಸಿ, ಈ ಮಕ್ಕಳಿಗೆ ಸೂಕ್ತ ಕಾರ್ಯತಂತ್ರಗಳನ್ನು ಸಂಬಂಧಿಸಿದ ಶಾಲೆಗೆ ತಿಳಿಸಿರುವುದು.

viii. ತಾಯಿ ಮತ್ತು ಶಿಕ್ಷಕರ ಸಮಿತಿಗಳನ್ನು ರಚಿಸಿ ಸಭೆಗಳು ಪ್ರತಿ ಶಾಲೆಯಲ್ಲಿ ಎರಡು ತಿಂಗಳಿಗೊಮ್ಮೆ ಕರೆಯಲು ಮುಖ್ಯಶಿಕ್ಷಕರಿಗೆ ಸಹಕಾರ ನೀಡುವುದು.

ix. ಇಲಾಖಾವತಿಯಿಂದ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಅನುಷ್ಠಾನಗೊಳ್ಳುವ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು.

x. ಹದಿಹರೆಯದ ಹೆಣ್ಣು ಮಕ್ಕಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲು ಅಂತಹ ಹೆಣ್ಣುಮಕ್ಕಳನ್ನು ಗುರ್ತಿಸುವುದು.

xi. ಕ್ಲಸ್ಟರ್ ಹಂತದ ಸಮಾಲೋಚನಾ ಸಭೆಯಲ್ಲಿ ಹಾಜರಾಗಿ ಪ್ರಗತಿ ವರದಿಯನ್ನು ಸಲ್ಲಿಸುವುದು.

xii. ನಿಗದಿತ ನಮೂನೆಯಲ್ಲಿ ಪ್ರಗತಿಯನ್ನು ಸಿ.ಆರ್.ಸಿ.ಗೆ ಸಲ್ಲಿಸಿ ಯಥಾ ಪ್ರತಿಯನ್ನು ಬಿ.ಆರ್.ಸಿ.ಗೆ ಸಲ್ಲಿಸುವುದು.

xiii. ಬ್ಲಾಕ್ ಹಂತದಲ್ಲಿ ಬಿ.ಜಿ.ಸಿ. ಕರೆಯುವ ಪ್ರತಿ ಮಾಹೆಯ ಸಭೆಯಲ್ಲಿ ಹಾಜರಾಗಿ ಪ್ರಗತಿಯನ್ನು ಚರ್ಚಿಸುವುದು.

xiv. ಮಹಿಳಾ ಸಂಘಗಳ ಸಹಕಾರವನ್ನು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪಡೆಯುವುದು.

xv. ಕ್ಲಸ್ಟರ್ ಹಂತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಕುರಿತು ಯೋಜನೆ ಸಿದ್ಧಪಡಿಸುವುದು.

4. <u>ನೆರೆಹೊರೆಯ ಗುಂಪು:</u>

1. ಪ್ರತಿ ಹಳ್ಳಿಗಳಲ್ಲಿ 20 ಮನೆಗಳಿಗೆ ಒಬ್ಬ ಮಹಿಳೆಯನ್ನು ನೆರೆಹೊರೆಯ ನಾಯಕಿಯೆಂದು ಆಯ್ಕೆಮಾಡುವುದು
2. ತಮಗೆ ಸಂಬಂಧ ಪಟ್ಟ 20 ಮನೆಗಳಲ್ಲಿ ಎಲ್ಲಾ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ ಎಂಬುದನ್ನು ಪರಿಕ್ಷಿಸುವುದು
3. ಶಾಲೆಗೆ ಬರುವ ಮಕ್ಕಳು ಸರಿಯಾಗಿ ಪಾಠ ಕಲಿಯುತ್ತಿದ್ದಾರೆಯೇ ಎಂಬುವುದನ್ನು ನೋಡುವುದು
4. ಶಾಲೆಗೆ ಬರದ ಮಕ್ಕಳ ಸಮಸ್ಯೆಗಳನ್ನು ಬಗೆಹರಿಸುವುದು
5. ಪ್ರತಿ ತಿಂಗಳು ಸಭೆಯಲ್ಲಿ ಭಾಗವಹಿಸಿ ಸಮಸ್ಯೆಗಳ ಬಗ್ಗೆ ಚರ್ಚಿಸಿ ವರದಿಗಳನ್ನು ಸಲ್ಲಿಸುವುದು

**ಇತರೆ ವಿವರಗಳು**

1. ಹೆಣ್ಣುಮಕ್ಕಳ ಶಿಕ್ಷಣ ಹೊರತು ಪಡಿಸಿ ರಾಜ್ಯ ಯೋಜನಾ ಕಚೇರಿಯ ಆದೇಶವಿಲ್ಲದೆ ಇವರ ಸೇವೆಯನ್ನು ಬೇರೆ ಕಾರ್ಯಕ್ಕೆ ಬಳಸುವಂತಿಲ್ಲ
2. ಎಲ್ಲಾ ಅಭ್ಯರ್ಥಿಗಳು ಇಲಾಖಾ ನಿಯಮಗಳಿಗೆ ಬದ್ಧರಾಗಿ ಕಾರ್ಯನಿರ್ವಹಿಸುವುದು
3. ಆಯ್ಕೆಯಾದ ಜಿಲ್ಲಾ ಜೆಂಡರ್ ಸಂಯೋಜಕರಿಗೆ ನಾಲ್ಕು ದಿನಗಳ ತರಬೇತಿಯನ್ನು ರಾಜ್ಯ ಮಟ್ಟದಲ್ಲಿ ಕೈಗೊಳ್ಳಲಾಗುವುದು. ಇವರ ಮೂಲಕ ತಾಲ್ಲೂಕು ಮತ್ತು ಕ್ಲಸ್ಟರ್ ಹಂತದ ಜೆಂಡರ್ ಸಂಯೋಜಕರಿಗೆ ತರಬೇತಿಯನ್ನು ಕೈಗೊಳ್ಳುವುದು.

   ಈ ತರಬೇತಿಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದು

   - ಜೆಂಡರ್ ಮತ್ತು ಶಿಕ್ಷಣ
   - ವ್ಯಕ್ತಿತ್ವ ವಿಕಸನ
   - ನೆರೆಹೊರೆ ಸಮಿತಿಗಳ ರಚನೆ ಹಾಗೂ ಜವಾಬ್ದಾರಿ
   - ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಕುರಿತು ವಿವಿಧ ಕಾರ್ಯಕ್ರಮಗಳ ಮಾಹಿತಿ
   - ಹೆಣ್ಣು ಮಕ್ಕಳ ಶಿಕ್ಷಣದ ಕಾರ್ಯಕ್ರಮಗಳ ಯೋಜನೆ ಹಾಗೂ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿ
   - ಶಾಲಾ ಹಂತದಿಂದ ಜಿಲ್ಲಾ ಹಂತದವರೆಗೆ ಶಾಲಾ ಸಮಿತಿಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳು.
   - ಕಾರ್ಯಕ್ರಮದ ಯೋಜನೆ, ನಿರ್ವಹಣೆ, ಮೇಲುಸ್ತುವಾರಿ, ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಕುರಿತು ಎರಡು ದಿನದ ತರಬೇತಿಯನ್ನು ಜಿಲ್ಲಾ ಹಂತದಿಂದ ಪಡೆದುಕೊಳ್ಳುವುದು.

4. ಜಿಲ್ಲಾ ಹಾಗೂ ತಾಲ್ಲೂಕು ಜೆಂಡರ್ ಸಂಯೋಜಕರ ಸೇವೆಯನ್ನು ಪಡೆಯಲಾಗುವ ಸಂಘ ಸಂಸ್ಥೆಗಳೊಂದಿಗೆ ಕರಾರನ್ನು ಏರ್ಪಡಿಸುವುದು ಹಾಗೂ ಕೆಳಕಂಡ ಶರತ್ತುಗಳು ಸೇರುವಂತೆ ಎಚ್ಚರವಹಿಸುವುದು.

   1. ಗೌರವಧನವನ್ನು ಕನಿಷ್ಠಪಕ್ಷ 90% ರಷ್ಟಾದರೂ ನೀಡುವುದು.
   2. ಸಂಯೋಜಕರು ದೀರ್ಘಕಾಲದ ಗೈರು ಹಾಜರಿ ಅಥವಾ ರಜೆಯಲ್ಲಿ ಇದ್ದಾಗ ಬದಲಿ ವ್ಯವಸ್ಥೆ ಮಾಡುವುದು.
   3. ಸಂಯೋಜಕರು ಕೆಲಸ ತ್ಯಜಿಸಿದ ಸಂದರ್ಭದಲ್ಲಿ ಕೂಡಲೇ ಬದಲಿ ವ್ಯವಸ್ಥೆ ಮಾಡುವುದು.
   4. ಸಂಬಂಧಿಸಿದ ಸಂಸ್ಥೆಗೆ ಚೆಕ್ ನೀಡಿದ ದಿನಾಂಕದಿಂದ ಐದು ದಿನಗಳೊಳಗಾಗಿ ಅಭ್ಯರ್ಥಿಗಳಿಗೆ ಗೌರವ ಧನ ವಿತರಿಸಿ, ಸ್ವೀಕೃತಿ ಪಡೆದು ಸಲ್ಲಿಸುವುದು.

**ಆದೇಶ:** **ಈ ಮೇಲಿನ ಎಲ್ಲಾ ಸೂಚನೆಗಳನ್ನು ತಪ್ಪದೇ ಪಾಲಿಸತಕ್ಕದ್ದು ಹಾಗೂ ಈ ಪ್ರಕ್ರಿಯೆಯನ್ನು ದಿನಾಂಕ 20.5.2006ರ ಒಳಗಾಗಿ ಮುಗಿಸಿ ವರದಿ ನೀಡುವುದು. ಏನಾದರೂ ಸಮಸ್ಯೆಗಳಿದ್ದಲ್ಲಿ ಪತ್ರ ವ್ಯವಹಾರ ನಡೆಸದೇ ನೇರವಾಗಿ ದೂರವಾಣಿ ಮೂಲಕ ಸಂಪರ್ಕಿಸಿ ಇತ್ಯರ್ಥಪಡಿಸಿಕೊಳ್ಳುವುದು.**

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ